**ಸಾಕ್ಷಿಗೆ ದಿನಾಂಕಃ06-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ.SSC ವಕೀಲರಿಂದ ::**

ನನ್ನ 13 ಗುಂಟೆ ಜಾಗವನ್ನು ಪ್ರತಿವಾದಿ ಮತ್ತು ಅವರ ಕುಟುಂಬದವರು ಒತ್ತುವರಿ ಮಾಡಿರುವ ಕಾರಣ ಸದರಿ ಒತ್ತುವರಿ ಬಿಡಿಸಿಕೊಡಲು ಈ ದಾವೆಯನ್ನು ಹೂಡಿರುತ್ತೇನೆ. ನನ್ನ ತಂದೆ ಪುಟ್ಟಯ್ಯನಿಗೆ ಒಟ್ಟು 7 ಜನ ಮಕ್ಕಳು ಇರುತ್ತಾರೆ. ನನ್ನ ತಂದೆ ಮೃತರಾದ ನಂತರ 4 ಜನ ಗಂಡು ಮಕ್ಕಳು ಕುಟುಂಬದ ವ್ಯವಸಾಯ ಜಮೀನುಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗದ ಅನ್ವಯ ನಾವುಗಳು ಖಾತೆ ಬದಲಾವಣೆ ಮಾಡಿಕೊಂಡು ನಮ್ಮ ಹಿಸ್ಸೆಯ ಜಮೀನಿನ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿ. ಸದರಿ ವಿಭಾಗವು 1984-85 ರಲ್ಲಿ ಆಗಿರುತ್ತದೆ. ದಾವಾ ಸರ್ವೇ ನಂಬರ್ 49 ರಲ್ಲಿ ಒಟ್ಟು 7 ಎಕರೆ 2 ಗುಂಟೆ ಜಮೀನು ಇರುತ್ತದೆ. ಅದರ ಪೈಕಿ 14 ಗುಂಟೆ ಖರಾಬು ಇರುತ್ತದೆ. ನನ್ನ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ ಲಕ್ಷ್ಮಣ ಹಾಗೂ ರಾಮಚಂದ್ರಪ್ಪ ರವರ ಜಮೀನು, ಪಶ್ಚಿಮಕ್ಕೆ ರೇವಣ್ಣ ಮತ್ತು ಅವರ ಸಹೋದರರ ಜಮೀನು, ಉತ್ತರಕ್ಕೆ ರೈಲ್ವೆ ಹಳಿ ಮತ್ತು ದಕ್ಷಿಣಕ್ಕೆ ಪ್ರತಿವಾದಿಗಳ ಹಾಗೂ ಇತರರ ಜಮೀನು ಇರುತ್ತದೆ. ಮೃತ ಪ್ರತಿವಾದಿ ನನ್ನ ತಮ್ಮ ಆಗಿರುತ್ತಾರೆ ಎಂದರೆ ಸರಿ. ನಾನು ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮಾಡಿಸಿರುವ ಹದ್ದುಬಸ್ತು ಕಾನೂನು ಬದ್ದವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಹದ್ದುಬಸ್ತು ಪ್ರಶ್ನಿಸಿ ಪ್ರತಿವಾದಿ ಕುಟುಂಬಸ್ಥರು DDLR ರವರ ಸಮಕ್ಷಮ ಮೇಲ್ಮನವಿ ಸಲ್ಲಿಸಿದ್ದು ಅದು ಬಾಕಿ ಇರುತ್ತದೆ ಎಂದರೆ ಸಾಕ್ಷಿ ಅದು ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ಅಸಲು ದಾವಾ 298/2020 ರಂತೆ ಒಂದು ದಾವೆಯನ್ನು ಹೂಡಿದ್ದು ಸದರಿ ದಾವೆಯಲ್ಲಿ ನಾನು ಪ್ರತಿವಾದಿ ಆಗಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾವೆಯು ವಿಭಾಗ ದಾವೆ ಆಗಿರುತ್ತದೆ ಎಂದು ನುಡಿಯುತ್ತಾರೆ.

ನಾನು ಮಾಡಿಸಿರುವ ಹದ್ದುಬಸ್ತು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಹದ್ದುಬಸ್ತನ್ನು ನಾನು ಸರ್ವೇ ಇಲಾಖೆಯವರ ಜೊತೆ ಶಾಮಿಲಾಗಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ದುರುದ್ದೇಶದಿಂದ ಸುಳ್ಳು

ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕಂದಾಯ ದಾಖಲೆಯನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: